ಶ್ರೀ ಕಡಿದಾಳ್ ದಿವಾಕರ್.—ಅಧ್ಯಕ್ಷರೇ ಜಿಲ್ಲಾವಾರು ದಾಖಲೆಯನ್ನು ಒದಗಿಸಿದ್ದಾರೆ, ಕ್ವಾರ್ಟರ್‌ಲಿ ಖರ್ಚಾಗಿರುವುದಕ್ಕೂ ಇಲ್ಲಿ ಖರ್ಚಾಗಿರುವುದನ್ನು ತೋರಿಸಿರುವುದಕ್ಕೂ ವ್ಯತ್ಯಾಸ ಇದೆ. ಈ ವ್ಯತ್ಯಾಸಕ್ಕೆ ಏನು ಕಾರಣ? ಇನ್ನು ತ್ರೈಮಾಸಿಕ ೨ ಲಕ್ಷ ೬೦ ಸಾವಿರ ಟನ್ ಎಂದು ಹೇಳಿದ್ದಾರೆ. ಇಲ್ಲಿ ೯೪ ಸಾವಿರ ಟನ್ ಎಂದು ತೋರಿಸಿದ್ದಾರೆ. ಹಾಗೆ ಜಿಲ್ಲಾವಾರು ಹಂಚಿಕೆ ಮಾಡುವಾಗ ವ್ಯತ್ಯಾಸ ವಾಗಲಿಕ್ಕೆ ಏನು ಕಾರಣ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.—Sir, before that there is a correction ಉತ್ತರ (ಅ)ನಲ್ಲಿ ತಿಂಗಳಿಗೆ ಎಂದು ಬರೆಯಲಾಗಿದೆ. ಅದು ತ್ರೈಮಾಸಿಕ ಎಂದು ಆಗಬೇಕು... It has to be read as quarterly. That is to be corrected in the answer. ಅದು ಒಂದು ವ್ಯತ್ಯಾಸ. ಜಿಲ್ಲಾವಾರು ಸರಬರಾಜು ಮಾಡಿದ್ದೇವೆ. ಇದರಲ್ಲಿ ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ ಕೊಟ್ಟಂತಹ ಯಾವ ಸರಬರಾಜು ಇದೆ ಅದನ್ನು ಸೇರಿಸಿಲ್ಲ. ಅದಕ್ಕೊಸ್ಕರ ವ್ಯತ್ಯಾಸ ಇದೆ.

ಶ್ರೀ ಕಡಿದಾಳ್ ದಿವಾಕರ್.—ಹಾಗಾದರೆ, ಸುಮಾರು ೬೦ ಪರ್ಸೆಂಟ್ ಬೇರೆ ಉದ್ದೇಶಗಳಿಗೋಸ್ಕರ ಕೊಟ್ಟಿದ್ದಾರೆ. ತ್ರೈಮಾಸಿಕವಾಗಿ ಹಂಚಿರತಕ್ಕ ಅಂಕಿಅಂಶಗಳನ್ನು ಪರಿಶೀಲಿಸಿದರೆ ಖಾಸಗಿಯವರಿಗೆ ೪೦ ಪರ್ಸೆಂಟ್ ಬರುತ್ತದೆ. ಬೆಂಗಳೂರು ನಗರಕ್ಕೆ ೫೦ ಪರ್ಸೆಂಟ್ ಹಂಚಿದ್ದಾರೆ. ಸರ್ಕಾರಿ ಕೆಲಸಗಳಿಗೆ, ಇತರ ಕೆಲಸಗಳಿಗೆ, ಬೆಂಗಳೂರು ನಗರಕ್ಕೆ ೫೦ ಪರ್ಸೆಂಟ್ ಹಂಚಿ ಇಡೀ ಸ್ಟೇಟ್‌ಗೆ ೫೦ ಪರ್ಸೆಂಟ್ ಹಂಚಲಿಕ್ಕೆ ಕಾರಣ ಏನು?

ಶ್ರೀ ಎಂ. ವೀರಪ್ಪ ಮೊಯಿಲಿ.—ಅದರ ಅರ್ಥ ಆ ರೀತಿ ಬರುವುದಿಲ್ಲ. ಇದರಲ್ಲಿ ಜಿಲ್ಲಾವಾರು ಕೊಟ್ಟಕೂಡಲೇ ಅದು ಪೂರ್ತಿ ಖಾಸಗಿಯವರಿಗೆ ಹೋಗಿದೆ ಎಂದು ಲೆಕ್ಕ ಆಲ್ಲ. ಮೊದಲನೆ ತ್ರೈಮಾಸಿಕ ದಲ್ಲಿ ೨ ಲಕ್ಷದ ೪೮ ಸಾವಿರ ಟನ್ ಅಲಾಟ್‌ಮೆಂಟ್ ಇದ್ದರೆ ಅದರಲ್ಲಿ ೧ ಲಕ್ಷ ೫ ಸಾವಿರದ ೧೪೫ ಟನ್ ಅದು ಜಿಲ್ಲಾವಾರು ಹಂಚಿದರೆ ಜಿಲ್ಲಾಧಿಕಾರಿಗಳಿಗೆ ಕೆಲವು ನಾರ್ಮ್ಸ್ ಇದೆ. ಅದೆಲ್ಲಾ ಖಾಸಗಿಯವರಿಗೆ ಹೋಗುವುದಿಲ್ಲ. ಅದರಲ್ಲಿ ಪಬ್ಲಿಕ್ ಡಿಸ್ಟ್ರಿಬ್ಯೂಷನ್ ಒಂದು ಅಂಶ ಇದೆ. ಉಳಿದದ್ದು ಹೋಗುವುದು ನೀರಾವರಿ ಮತ್ತು ವಿದ್ಯುಚ್ಛಕ್ತಿ ಇಲಾಖೆಯವರಿಗೆ ಖಾಸಗಿಯವರಿಗೆ ಹೋಗುವುದಿಲ್ಲ.

ಶ್ರೀ ಎಸ್. ಎಂ. ವೀರನಾಳ ಚಂದ್ರಶೇಖರ್.—ಅಧ್ಯಕ್ಷರೆ, ಇತ್ತೀಚಿನ ದಿನಗಳಲ್ಲಿ ರಾಜ್ಯದಲ್ಲಿ ಸಿಮೆಂಟ್ ತೀವ್ರ ಅಭಾವವಾಗಲಿಕ್ಕೆ ಕಾರಣ ಏನು? ಬಹಳಷ್ಟು ಜನ ಖಾಸಗಿ ವ್ಯಕ್ತಿಗಳು ಫೌಂಡೇಷನ್ ಹಾಕಿ ತಿಂಗಳುಗಟ್ಟಲೆ ಬಿಡಬೇಕಾಗಿದೆ, ಲಿಂಟಲ್ ಲೆವೆಲ್‌ವರೆಗೆ ಕಟ್ಟಿ ಒಂದು ವರ್ಷ ಕಾಯಬೇಕಾಗಿದೆ, ಬಹಳಷ್ಟು ಬವಣೆ ಪಡುತ್ತಿದ್ದಾರೆ. ಅದೇ ಬ್ಲಾಕ್ ವರ್ಕ್‌ಟ್ಟಿನಲ್ಲಿ ಹೆಚ್ಚು ದುಡ್ಡು ಕೊಟ್ಟು ಕೊಳ್ಳುವು ದಾದರೆ ಬೇಕಾದಷ್ಟು ಸಿಮೆಂಟ್ ಸಿಕ್ಕುತ್ತದೆ. ಈಗ ಇರತಕ್ಕ ಸಿಮೆಂಟಿನ ಅಭಾವವನ್ನು ಹೋಗಲಾಡಿಸ ಲಿಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಂ. ವೀರಪ್ಪ ಮೊಯಿಲಿ.—ಸಿಮೆಂಟ್ ಕೊರತೆ ಇದೆ ಅಂದ ತಕ್ಷಣ ಬೇಡಿಕೆ ಜಾಸ್ತಿ ಇರು ತ್ತದೆ. ಆದೇ ರೀತಿ ಬಿಲ್ಡಿಂಗ್ ಕಟ್ಟತಕ್ಕದ್ದು ಜಾಸ್ತಿಯಾಗಿದೆ. ಬೇಡಿಕೆ ಕೂಡ ಜಾಸ್ತಿ ಆಗಿದೆ. ಈ ಕಾರಣದಿಂದಾಗಿ ನಾವು ಎಲ್ಲಾ ಸಿಮೆಂಟ್ ಫ್ಯಾಕ್ಟರಿಗಳಿಗೂ ವಿದ್ಯುಚ್ಛಕ್ತಿ ಕಡಿತದಿಂದ ಹೊರತುಪಡಿಸಿ ದ್ದೇವೆ. ವಿದ್ಯುಚ್ಛಕ್ತಿ ಕಡಿತದಿಂದ ಹೊರತುಪಡಿಸದ ಕೂಡಲೇ ಈ ಇಂಕ್ರಿಮೆಂಟಲ್ ವ್ಯಾಲ್ಯೂ ೭೫ ಪರ್ಸೆಂಟ್ ಪ್ರೊಡಕ್ಷನ್ ಯಾವುದು ಇದೆ ಅದು ಹೆಚ್ಚು ಕೊಡಬೇಕೆಂದು ಕೇಂದ್ರ ಸರ್ಕಾರದವರು ಒಪ್ಪಿ ಕೊಂಡಿದ್ದಾರೆ. ಆದರ ಪ್ರಕಾರ ೫೦ ಪರ್ಸೆಂಟ್ ನಮಗೆ ಕೊಡುತ್ತಿದ್ದಾರೆ. ಇನ್ನೂ ೨೫ ಪರ್ಸೆಂಟ್ ಕೊಡಬೇಕೆಂದು ಕೇಂದ್ರದ ಮುಂದೆ ನಮ್ಮ ಬೇಡಿಕೆಯನ್ನು ಇಟ್ಟಿದ್ದೇವೆ. ಎಲ್ಲ ಹಂತಗಳಲ್ಲಿಯೂ ಕೂಡ ಹೆಚ್ಚು ಸಿಮೆಂಟ್ ಸರಬರಾಜು ಆಗಬೇಕೆಂದು ನಮ್ಮ ಸತತ ಪ್ರಯತ್ನ ನಡೆಯುತ್ತಿದೆ Now we are getting 50% and we are trying to get 75%. ಅದು ಅಲ್ಲದೆ, ಅಧ್ಯಕ್ಷರೆ, ನಮಗೆ ವಿದೇಶವಿನಿಮಯದಿಂದ ಬರತಕ್ಕ ಸಿಮೆಂಟ್, ಇದಕ್ಕೆ ಹೊರತಾಗಿ ಬರತಕ್ಕ ಸಿಮೆಂಟ್ ಅದು ಬರುತ್ತದೆ. ಆದ್ದರಿಂದ, ಈ ಬಗ್ಗೆ ಎಲ್ಲ ಕ್ರಮಗಳನ್ನು ತೆಗೆದುಕೊಂಡಿದೆ. ಇನ್ನು ರೈಲ್ವೆ ವ್ಯಾಗನ್ ಬಗ್ಗೆ ಮಾನ್ಯ ರೈಲ್ವೆ ಮಂತ್ರಿಗಳಿಗೆ ಬರೆದು ತಿಳಿಸಿದ್ದರಿಂದ, ಅವರೂ ಕೂಡ ವ್ಯಾಗನ್ ಮೂವ್‌ಮೆಂಟ್ ಬಗ್ಗೆ ಅನುಕೂಲ ಮಾಡಿಕೊಟ್ಟು ಕ್ಷಿಪ್ರ ಕಾಲದಲ್ಲಿ ರಾಜ್ಯಕ್ಕೆ ಸಿಮೆಂಟ್ ಬರುವ ವ್ಯವಸ್ಥೆಯನ್ನಾ ಮಾಡಿದ್ದಾರೆ.